

ಕೆ.ಎಲ್. ರಾಹುಲ್



ರಿಷಭ್ ಪಂತ್

ತಂಡದ ಹಸರಂಗ ಡಿಸಿಲ್ವ (26 ವಿಕೆಟ್) ಅವರಂತಹ ಚಾಲಾಕಿ ಸ್ಪಿನ್ನರ್‌ಗಳು ಗಳಿಸಿದ ವಿಕೆಟ್‌ಗಿಂತ ರಶೀದ್ ಖಾನ್ (19 ವಿಕೆಟ್) ಪಡೆದ ವಿಕೆಟ್‌ಗಳ ಸಂಖ್ಯೆ ಕಡಿಮೆಯಾದರೂ, ಒಬ್ಬ ಆಲ್‌ರೌಂಡರ್ ಆಗಿ ತಮ್ಮ ನಾಯಕನ ನೆಚ್ಚು ಗೆಯನ್ನು ಅವರು ನಿಭಾಯಿಸಿದ ರೀತಿ ವಿಶೇಷ. ಎರಡು ಪಂದ್ಯಗಳಲ್ಲಿ ಮೂಡಿದ್ದ ಸೋಲಿನ ತೂಗುಗತ್ತಿಯನ್ನು ರಶೀದ್ ಹೊಡೆದೋಡಿಸಿದ ಬಗೆಯನ್ನು ನಾವು ಕಂಡಿದ್ದೇವೆ.

ಈ ಸಲದ ಐಪಿಎಲ್‌ನಲ್ಲಿ ನಾಯಕತ್ವದ ವಿಷಯದಲ್ಲಿ ಇನ್ನಷ್ಟು ಗಟ್ಟಿಯಾದದ್ದೂ ಅಲ್ಲದೆ ಖುದ್ದು ತಮ್ಮ ಬ್ಯಾಟಿಂಗ್ ಪ್ರದರ್ಶನವನ್ನು ಕಾಯ್ದುಕೊಂಡವರು ಕರ್ನಾಟಕದ ಕೆ.ಎಲ್. ರಾಹುಲ್. ಜಾಸ್ ಬಟ್ಲರ್ ಅವರನ್ನು ಹೊರತುಪಡಿಸಿದರೆ ಅತಿ ಹೆಚ್ಚು ರನ್ ಗಳಿಸಿದವರು ಅವರೇ. 51.3ರ ಸರಾಸರಿಯಲ್ಲಿ 616 ರನ್‌ಗಳನ್ನು ಅವರು ಹರಿಸಿದರು. ಎರಡು ಶತಕಗಳು, ನಾಲ್ಕು ಅರ್ಧ ಶತಕಗಳು ಅದರಲ್ಲಿ ಸೇರಿದ್ದು ವಿಶೇಷ. 135.38ರ ಸ್ಟ್ರೈಕ್‌ರೇಟ್ ಉತ್ತಮವಾದರೂ ಆಗೀಗ ಅವರೂ ಒತ್ತಡದಲ್ಲಿ ಸಿಲುಕಿದ್ದಕ್ಕೂ ಇದು ಕನ್ನಡಿ ಹಿಡಿಯುತ್ತದೆ.

ರಾಹುಲ್‌ಗೆ ಅವೇಶ್ ಖಾನ್, ಜೇಸನ್ ಹೋಲ್ಡರ್, ರವಿ ಬಿಷ್ಣೋಯ್ ತರಹದ ಚುರುಕುಮತಿ ಬೌಲರ್‌ಗಳ ಸಾಥ್ ಸಿಕ್ಕಿತು. ಆಯುಷ್ ಬಡೋನಿ ತರಹದ ಪುಟಾಣಿ ಪಟಾಕಿಯೂ ಬತ್ತಳಿಕೆಯಲ್ಲಿತ್ತು. ಕಷ್ಟಗಾಲದಲ್ಲಿ ಹೂಡಾ ನೆರವಿಗೆ ಬಂದ ಉದಾಹರಣೆಗಳೂ ಇವೆ. ಇಷ್ಟಾಗಿಯೂ ರಾಹುಲ್ ಮಾಡಿದ ಸಣ್ಣಪುಟ್ಟ ಬ್ಯಾಟಿಂಗ್ ಬದಲಾವಣೆಯ ಪ್ರಯೋಗ ಅವರಿಗೆ ಕೆಲವು ಪಂದ್ಯಗಳಲ್ಲಿ ಕೈಕೊಟ್ಟಿತು. 'ಗುಜರಾತ್ ಟೈಟನ್ಸ್' ತಂಡಕ್ಕೆ ಸರಿಸಮನಾಗಿ ಆಡಬಲ್ಲ ಇನ್ನೊಂದು ತಂಡವಾಗಿ ಲಖನೌ ಹೊಮ್ಮಿದ್ದರಲ್ಲಿ ರಾಹುಲ್ ಕಾಣ್ಕೆ ದೊಡ್ಡದು.

ಐಪಿಎಲ್ ನಾಯಕತ್ವದ ತುಲನೆಯಲ್ಲಿ ರೋಹಿತ್ ಶರ್ಮ, ರಿಷಭ್ ಪಂತ್, ಮಯಂಕ್ ಅಗರ್‌ವಾಲ್... ಅಷ್ಟೇ ಏಕೆ, ಮಹೇಂದ್ರ ಸಿಂಗ್ ದೋನಿ ಕೂಡ ಕುಸಿದರು. ಶ್ರೇಯಸ್ ಅಯ್ಯರ್ ಪ್ರಯೋಗಗಳು ವಿಪರೀತ ಕೈಕೊಟ್ಟವು. ರೋಹಿತ್ ಶರ್ಮ ಸ್ಕೋರ್‌ಗಳಿಕೆಯ ಪಟ್ಟಿಯಲ್ಲಿ 35ನೇ ಸ್ಥಾನದಲ್ಲಿದ್ದಾರೆ. ರಿಷಭ್ 23ನೇ ಸ್ಥಾನದಲ್ಲಿದ್ದರೆ, ಶ್ರೇಯಸ್ ಅಯ್ಯರ್ ಅವರಿಗೆ 16ನೇ ಸ್ಥಾನ. ಸಂಜು ಸ್ಯಾಮ್ಸನ್ 9ನೇ ಸ್ಥಾನದಲ್ಲಿದ್ದು, ಅವರೂ ಬದಲಾದ ಸವಾಲುಗಳನ್ನು ಎದುರಿಸಲು ಆಗೀಗ ವಿಫಲರಾದರು. ರೋಹಿತ್ ಶರ್ಮ 48 ರನ್‌ಗಳಿಸಿದ್ದೇ ಈ ಬಾರಿ ಅವರ ವೈಯಕ್ತಿಕ ಗರಿಷ್ಠ ಸ್ಕೋರ್.

ರೋಹಿತ್‌ರ ಗರಡಿಯಲ್ಲಿ 'ಮುಂಬೈ ಇಂಡಿಯನ್ಸ್' ತಂಡದ ಪರವಾಗಿ ಆಡಿ ಪಳಗಿದ ಹಾರ್ದಿಕ್ ತಮ್ಮ ಸಮಚಿತ್ತದ ತಣ್ಣಗಿನ ನಿರ್ಣಯಗಳಿಂದ ಮನಗೆದ್ದರು. ಫೈನಲ್ ಪಂದ್ಯದಲ್ಲಿ ಸೂಕ್ತ ಸಂದರ್ಭದಲ್ಲಿ ಬೌಲಿಂಗ್ ಮಾಡುವ ರಿಸ್ಕ್ ತೆಗೆದುಕೊಂಡದ್ದು, ಹೊಣೆಗಾರಿಕೆಗೆ ಅವರು ಹೇಗೆ ಎದೆಗೊಡುತ್ತಾರೆನ್ನುವುದಕ್ಕೆ ಸಾಕ್ಷಿ.

ಬರೀ ದಾಳಿಕೋರತನವಷ್ಟೇ ಫಲ ನೀಡದು; ಸಂಯಮವನ್ನೂ ಅದಕ್ಕೆ ಬೆರೆಸಬೇಕು ಎಂಬ ನಾಯತ್ವದ ಪಾಠವನ್ನು ಈ ಸಲದ ಐಪಿಎಲ್ ಹೇಳಿದೆ. ಕೇನ್ ವಿಲಿಯಮ್ಸನ್ ಅಂತಹ ತಣ್ಣಗಿರುವ ನಾಯಕರಾದರೂ, ಈ ಸಲ ಅವರ ಸ್ಟ್ರೈಕ್ ರೇಟ್ 95ಕ್ಕಿಂತ ಕಡಿಮೆ ಇದ್ದುದು, ಅನುಭವಿಗಳನ್ನೂ ಒತ್ತಡ ಹೇಗೆ ಉಡುಗಿಸಿಬಿಡುತ್ತೆನ್ನುವುದಕ್ಕೆ ಪುಷ್ಟಿ ಕೊಡುತ್ತದೆ. ಹಾರ್ದಿಕ್ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತಮ್ಮ ಆಲ್‌ರೌಂಡರ್ ಪಾತ್ರವನ್ನು ಇನ್ನುಮುಂದೆ ಹೇಗೆ ನಿಭಾಯಿಸುತ್ತಾರೆ ಎನ್ನುವ ಕುತೂಹಲದ ಕಣ್ಣುಗಳೀಗ ತೆರೆದುಕೊಂಡಿವೆ.

ಪ್ರತಿಕ್ರಿಯಿಸಿ: feedback@sudha.co.in





# ವಶೀಕರಣ ಸ್ಪೆಷಲಿಸ್ಟ್



ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
ಗುರೂಜಿ ಮಹೇಶ್‌ಭಟ್

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನನ್ನು ಸಾಧಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ
"ಗುರೂಜಿ ಮಹೇಶ್‌ಭಟ್"
ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಭಾದೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.
ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಗುರೂಜಿ ಮಹೇಶ್‌ಭಟ್
9686999517